

ವಾಸುದೇವ ಮೂರ್ತಿ ಪಿ.

# ತೆರೆದ ಕಿಟಕಿ

“ಅಂಕಲ್ ಬಿಡಿ. ನಾವೆಲ್ಲಾ ಬೆಂಗಳೂರು ಬಿಡುವಾಗ ಸುಮಾರು ಏಳು ಗಂಟೆ... ಆಗ ಲೂಸಿ ಬದುಕಿದ್ದಳು. ಇವನು, ಬಾಲ್ಕನಿಯಲ್ಲಿ ನಿಂತ ಲೂಸಿಗೆ ಬಾಯ್ ಮಾಡಿದ. ಪೊಲೀಸರು ಹೇಳುವ ಲೂಸಿ ಸಾವಿನ ಸಮಯದಲ್ಲಿ ಇವನು ನಮ್ಮ ಜೊತೆ ಇದ್ದ... ಹೆದ್ದಾರಿಯ ದಾಬಾದಲ್ಲಿ ಊಟ ಮಾಡುತ್ತಿದ್ದ... ಮನೆಯಲ್ಲಿ ಇರಲಿಲ್ಲ” ಬಿಜುವನ್ನು ಬಿಡಿಸಲು ಪ್ರಯತ್ನಿಸತೊಡಗಿದ ಡಿಮೆಲೋ.

ಅವನ ಮಾತುಗಳನ್ನು ಕೇಳಿಸಿಕೊಳ್ಳದವನಂತೆ – “ಎಲ್ಲರೆದುರಿಗೇ ನನ್ನ ಮಗಳನ್ನು ಕೊಲೆ ಮಾಡುತ್ತೇನೆ ಅಂತ ಹೇಳಿದೆಯಲ್ಲಾ... ಹಾಗೆಯೇ ಮಾಡಿಬಿಟ್ಟೆಯಾ... ಇದನ್ನೂ ಅವಳೇ ಹೇಳಿಕೊಟ್ಟಳಾ... ಅಥವಾ ಯಾರಿಗೂ ಅನುಮಾನ ಬರದಹಾಗೆ ಅವಳಿಂದಲೇ ಈ ಕೆಲಸ ಮಾಡಿಸಿದೆಯಾ?” ಎಂದು ಲೂಸಿಯ ತಂದೆ ಅರಚುತ್ತಿದ್ದ.

ಅವರ ಅಬ್ಬರ ನೋಡಿ, ಬಿಡಿಸಲು ಬಂದ ಕಾನ್‌ಸ್ಟೆಬಲ್‌ಗೆ ಸುಮ್ಮನಿರು ಎಂದು ಸನ್ನೆ ಮಾಡಿದ ಎಸಿಪಿ ರುದ್ರೇಶ್. ಸಿಟ್ಟಿನ ಕೈಗೆ ಬುದ್ಧಿಯನ್ನು ಕೊಟ್ಟ ವ್ಯಕ್ತಿ, ಮನಸ್ಸಿನಲ್ಲಿದ್ದುದನ್ನು ಕಕ್ಕಿಬಿಡುತ್ತಾನೆ. ಆಗ, ನಿಜ ಮತ್ತು ಅವನ ನಿಜರೂಪ ಎರಡೂ ತಿಳಿಯುತ್ತದೆ ಎನ್ನುವ ಕ್ರಿಮಿನಲ್ ಸೈಕಾಲಜಿಯ ಮೊದಲ ಪಾಠ ಯಾವಾಗಲೂ ಅವನ ನೆರವಿಗೆ ಬರುತ್ತಿತ್ತು.

“ನಾನೇನು ಯಾರ ಹಿಂದೆಯೂ ಹೋಗಿರಲಿಲ್ಲ... ಅವಳನ್ನು ಕರೆತಂದು ನನ್ನ ಜೊತೆ ಬಿಟ್ಟಿದ್ದು ನಿಮ್ಮ ಮಗಳೇ. ಆಗ ಸುಮ್ಮನಿದ್ದ ನೀವು ಈಗ ಬೊಬ್ಬೆ ಹಾಕುತ್ತಿದ್ದೀರಾ? ನಾನೇ ಈ ಕೊಲೆ ಮಾಡಿದೆ ಅಂತ ಹೇಳ್ತಾ ಇದಿರಾ?” ಬಿಜು ಕೂಡಾ ದನಿಯೇರಿಸಿದ.

“ಲೂಸಿ ಹೆಸರಿನಲ್ಲಿದ್ದ ಆಸ್ತಿ ನಿನ್ನಂಥಾ ಕೆಲಸವಿಲ್ಲದವನನ್ನು ಕ್ರಿಮಿನಲ್ ಆಗಿ ಮಾಡುತ್ತದೆ... ಈಗ ಲೂಸಿಯ ಹಣ, ಬೇರೆ ಹೆಣ್ಣಿನ ಸಂಗ ಎರಡೂ ಸಿಗುತ್ತವೆ ಅಂತ ತಿಳಿದುಕೊಳ್ಳಬೇಡ. ನಿನ್ನನ್ನು ನಾನು ಸುಮ್ಮನೆ ಬಿಡೋದಿಲ್ಲ...”